**ದಿನಾಂಕ: 17.03.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು: 2 ನೇ ಎದುರುದಾರರ ಪರ ವಕೀಲರಿಂದ:**

ನಾನು ಚಿಕ್ಕಬಳ್ಳಾಪುರದಿಂದ ಬೆಂಗಳೂರಿಗೆ ಮೋಟಾರು ಸೈಕಲ್ ಚಾಲನೆ ಮಾಡಿಕೊಂಡು ಬರುತ್ತಿದ್ದೆನು. ಅಪಘಾತ ಸ್ಥಳದಲ್ಲಿ ಯೂ ಟರ್ನ್ ತೆಗೆದುಕೊಳ್ಳಲು ಸ್ಥಳಾವಕಾಶ ಇದೆ ಎಂದರೆ ಸರಿ. ಅಪಘಾತ ಸ್ಥಳದಲ್ಲಿ ಟ್ರಾಫಿಕ್ ಸಿಗ್ನಲ್ ಇತ್ತು ಎಂದರೆ ಸರಿಯಲ್ಲ, ಇತ್ತೀಚೆಗೆ ಅಳವಡಿಸಿರುತ್ತಾರೆ ಎಂದು ನುಡಿಯುತ್ತಾರೆ. ನಾನು ಮೋಟಾರು ಸೈಕಲ್ಲನ್ನು ಚಾಲನೆ ಮಾಡಿಕೊಂಡು ಹೋಗುತ್ತಿದ್ದಾಗ ಓಮಿನಿ ಕಾರು ಚಾಲಕನು ಯೂ ಟರ್ನ್ ತೆಗೆದುಕೊಂಡ ನಂತರ ಮುಂದೆ ಹೋಗಲು ಸಾಧ್ಯವಾಗದೆ ವಾಹನವನ್ನು ಮಧ್ಯಭಾಗದಲ್ಲಿ ನಿಲ್ಲಿಸಿದ ಕಾರಣ ನಾನು ಚಾಲನೆ ಮಾಡುತ್ತಿದ್ದ ಮೋಟಾರು ಸೈಕಲ್ಲಿಗೆ ತಕ್ಷಣದಲ್ಲಿ ಬ್ರೇಕ್ ಅನ್ನು ಹಾಕಿದ ಪರಿಣಾಮ ನನ್ನ ದ್ವಿಚಕ್ರ ವಾಹನ ಸ್ಕಿಡ್ ಆದ ಕಾರಣ ನಾನು ದ್ವಿಚಕ್ರ ವಾಹನದಿಂದ ಕೆಳಗೆ ಬಿದ್ದು ನಾನು ಜಾರಿಕೊಂಡು ಹೋಗಿ ಓಮಿನಿ ಕಾರಿನ ಹಿಂಬದಿಯ ಚಕ್ರಕ್ಕೆ ನನ್ನ ತಲೆ ಹೊಡೆದಿರುತ್ತದೆ, ಆ ವೇಳೆಯಲ್ಲಿ ನಾನು ಹೆಲ್ಮೆಟ್ ಹಾಕಿದ್ದ ಕಾರಣ ನನ್ನ ತಲೆಗೆ ಹೆಚ್ಚಾಗಿ ಪೆಟ್ಟಾಗಿರಲಿಲ್ಲ, ನನ್ನ ಎಡಗೈನ ಮೂಳೆ ಮುರಿಯಿತು ಮತ್ತು ನನ್ನ ದೇಹದ ಇತರೆ ಭಾಗಗಳಿಗೆ ತರಚಿದ ಗಾಯಗಳುಂಟಾದವು.

**2.** 2010 ನೇ ಇಸವಿಯಿಂದ ನಾನು ಚಾಲನೆ ಮಾಡುತ್ತಿದ್ದೇನೆ. ಅರ್ಜಿ ಮತ್ತು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳುವ ರೀತಿಯಲ್ಲಿ ಅಪಘಾತವಾಗಿರುವುದಿಲ್ಲ ಎಂದರೆ ಸರಿಯಲ್ಲ. ಆ ದಿನ ನೀವೇ ಗಾಬರಿಯಿಂದ ವಾಹನ ಚಾಲನೆ ಮಾಡಿ ಸ್ಕಿಡ್ ಆಗಿ ಬಿದ್ದು ಅಪಘಾತಪಡಿಸಿಕೊಂಡಿರುತ್ತೀರಿ ಎಂದರೆ ಸರಿಯಲ್ಲ. ನೀವೇ ಸ್ವತಃ ಸ್ಕಿಡ್ ಆಗಿ ಬಿದ್ದ ಕಾರಣ ನಿಮ್ಮ ವಾಹನದ ಬಿಡಿ ಭಾಗಗಳು ಜಖಂಗೊಂಡಿದ್ದವು ಎಂದರೆ ಸರಿಯಲ್ಲ. ಆ ದಿನ ನೀವು ಯೂ ಟರ್ನ್ ಇರುವ ಕಡೆ ಸ್ವಲ್ಪ ಎಚ್ಚರಿಕೆ ವಹಿಸಿದ್ದಲ್ಲಿ ಅಪಘಾತವಾಗಿರುತ್ತಿರಲಿಲ್ಲ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ಓಮಿನಿ ಕಾರಿನ ಚಾಲಕನ ತಪ್ಪಿನಿಂದ ಅಪಘಾತವಾಗಿರುತ್ತದೆ ಎಂದು

ನುಡಿಯುತ್ತಾರೆ. ಆ ದಿನ ನೀವು ಬೆಂಗಳೂರಿಗೆ ಹೋಗುವ ಆತುರದಲ್ಲಿದ್ದ ಕಾರಣ ಅತಿವೇಗ ಹಾಗೂ ಅಜಾಗರೂಕತೆಯಿಂದ ದ್ವಿಚಕ್ರ ವಾಹನವನ್ನು ಚಾಲನೆ ಮಾಡಿದ ಕಾರಣ ಅಪಘಾತವಾಗಿರುತ್ತದೆ ಎಂದರೆ ಸರಿಯಲ್ಲ. ನಿಮ್ಮ ತಪ್ಪಿನಿಂದ ಅಪಘಾತವಾಗಿದ್ದರೂ ಸಹ ಓಮಿನಿ ವಾಹನದ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿದ್ದೀರಿ ಎಂದರೆ ಸರಿಯಲ್ಲ. ಓಮಿನಿ ಕಾರಿನ ಚಾಲಕನ ತಪ್ಪಿನಿಂದ ಅಪಘಾತವಾಗಿರುವುದಿಲ್ಲ ಎಂದರೆ ಸರಿಯಲ್ಲ.

**3.** ಅಪಘಾತವಾದ ತಕ್ಷಣ ಅಪೂರ್ವ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ಆ ನಂತರ Oyster CMI Hospital ನಲ್ಲಿ 3 ದಿನಗಳ ಕಾಲ ಚಿಕಿತ್ಸೆ ಪಡೆದುಕೊಂಡೆನು. ನನ್ನ ಎಡಗೈ ತೋಳಿನ ಮೂಳೆ ಮುರಿತಗೊಂಡಿದ್ದು, ಪ್ಲೇಟ್ ಅಳವಡಿಸಿ ಶಸ್ತ್ರ ಚಿಕಿತ್ಸೆ ಮಾಡಿರುತ್ತಾರೆ. ಈಗಲೂ ಸಹ ಒಳಜೋಡಣೆ ಹಾಗೆ ಇದೆ. ಆಸ್ಪತ್ರೆಗೆ 6 ರಿಂದ 7 ಬಾರಿ ಹೋಗಿದ್ದೆನು. ನೀವು ಆಸ್ಪತ್ರೆ ಖರ್ಚು ರೂ.17,846/- ಗಳು ಮಾತ್ರ ಆಗಿರುತ್ತದೆ ಎಂದರೆ ಸರಿ. ಆ ಬಿಲ್ಲಿನ ಜೊತೆ ನೀವು ರೂ.6,36,708/- ಗಳ ತರಕಾರಿ ಬಿಲ್ಲುಗಳನ್ನು ಸೇರಿಸಿರುತ್ತೀರಿ ಎಂದರೆ ಸಾಕ್ಷಿಯು ನಾನು ತರಕಾರಿ ಬೆಳೆದು ಮಾರಾಟ ಮಾಡಿರುವ ಬಿಲ್ಲುಗಳನ್ನು ಹಾಜರುಪಡಿಸಿರುತ್ತೇನೆ ಎಂದು ನುಡಿಯುತ್ತಾರೆ. ಅಪಘಾತದಿಂದ ಉಂಟಾದ ಗಾಯಗಳು ಗುಣಮುಖವಾಗಿದೆ, ಆದರೆ ಮೊದಲಿನಂತೆ ಕೆಲಸ ಮಾಡಲು ಸಾಧ್ಯವಾಗುತ್ತಿಲ್ಲ. ಮುಖ್ಯ ವಿಚಾರಣೆಯ 3 ಮತ್ತು 4 ನೇ ಖಂಡಿಕೆಯಲ್ಲಿರುವ ಅಂಶಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ. ನಾನು ದ್ವಿತೀಯ ಪಿಯುಸಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನ್ನ ಜನ್ಮ ದಿನಾಂಕ ದಿ.27.07.1980 ಆಗಿರುತ್ತದೆ. ಅಪಘಾತದ ಸಮಯದಲ್ಲಿ ನಿಮಗೆ 45 ವರ್ಷ ವಯಸ್ಸಾಗಿತ್ತು ಎಂದರೆ 42 ವರ್ಷ ವಯಸ್ಸಾಗಿತ್ತು ಎಂದು ನುಡಿಯುತ್ತಾರೆ.

**4.** ನಾನು ವ್ಯವಸಾಯ ಮಾಡುತ್ತೇನೆ. ನನ್ನ ಹೆಸರಿನಲ್ಲಿ 4 ಎಕರೆ ನೀರಾವರಿ ಜಮೀನು

ಇದೆ. ನಿ.ಪಿ.9 ರ ಪಹಣಿಯಲ್ಲಿ ಬೆಳೆಯ ಮಾಹಿತಿಯಲ್ಲಿ ರಾಗಿ ಎಂದು ನಮೂದಿದೆ ಎಂದರೆ ಸರಿ. ತರಕಾರಿ ಬಿಲ್ಲುಗಳನ್ನು ಪ್ರಕರಣಕ್ಕಾಗಿ ಸೃಷ್ಟಿ ಮಾಡಿ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಿ ಎಂದರೆ ಸರಿಯಲ್ಲ. ತರಕಾರಿ ಮಾರಾಟ ಮಾಡಿ ಅದರಿಂದ ಬಂದಂತಹ ಹಣವನ್ನು ಬ್ಯಾಂಕಿನಿಂದ ಸ್ವೀಕರಿಸಿರುವುದಿಲ್ಲ, ನಗದು ಮುಖಾಂತರ ಸ್ವೀಕರಿಸಿದ್ದೇನೆ ಎಂದು ನುಡಿಯುತ್ತಾರೆ. 2019 ರಿಂದ ರೈತರು ಮಾರುಕಟ್ಟೆಯಲ್ಲಿ ಮಾರಾಟವಾದ ಬೆಳೆಗಳಿಗೆ ಸರ್ಕಾರ ಬ್ಯಾಂಕ್ ಮುಖಾಂತರ ಹಣ ವರ್ಗಾಯಿಸುತ್ತದೆ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ನಗದಾಗಿ ಹಣ ಪಡೆದುಕೊಳ್ಳುತ್ತಿದ್ದೆನು ಎಂದು ನುಡಿಯುತ್ತಾರೆ. ಈ ಬಗ್ಗೆ ಸಾಕ್ಷಿದಾರರನ್ನು ವಿಚಾರಣೆ ಮಾಡಲು ನನಗೆ ತೊಂದರೆ ಇರುವುದಿಲ್ಲ. ನೀವು ಯಾವುದೇ ವಾಣಿಜ್ಯ ಬೆಳೆ ಬೆಳೆಯುತ್ತಿರಲಿಲ್ಲ ಎಂದರೆ ಸರಿಯಲ್ಲ. ನೀವು ರಾಗಿ ಬೆಳೆ ಬೆಳೆಯುತ್ತಿದ್ದೀರಿ ಎಂದರೆ ಸರಿಯಲ್ಲ. ನಿಮಗೆ ತಿಂಗಳಿಗೆ 40 ಸಾವಿರ ಆದಾಯವಿರಲಿಲ್ಲ ಎಂದರೆ ಸರಿಯಲ್ಲ. ಆಸ್ಪತ್ರೆಗಾಗಿ 6 ಲಕ್ಷ ರೂ. ಖರ್ಚಾಗಿರಲಿಲ್ಲ ಎಂದರೆ ಸಾಕ್ಷಿಯು ನಾನು ಇಎಸ್‌ಐ ಸೌಲಭ್ಯ ಪಡೆದುಕೊಂಡಿದ್ದೆನು ಎಂದು ನುಡಿಯುತ್ತಾರೆ. ಮುಂದುವರೆದ ಚಿಕಿತ್ಸೆಗಾಗಿ ರೂ.7,70,000/- ಅವಶ್ಯಕತೆ ಇರುವುದಿಲ್ಲ ಎಂದರೆ ಸರಿಯಲ್ಲ. ಹೆಚ್ಚಿನ ಪರಿಹಾರಕ್ಕಾಗಿ ಸುಳ್ಳು ದಾಖಲೆಗಳನ್ನು ಹಾಜರುಪಡಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ).**

**(ಓ.ಹೇ.ಕೇ.ಸ.ಇ.)**

**( ಶ್ರೀಮತಿ. ನಿರ್ಮಲ ಎಂ.ಸಿ)**
ಎಸಿಜೆಎಂ ನ್ಯಾಯಾಧೀಶರು
ಲಘು ವ್ಯವಹಾರಗಳ ನ್ಯಾಯಾಲಯ